ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 10 | ಅಕ್ಟೋಬರ್ – ಡಿಸೆಂಬರ್ 2024 | ಸಂಚಿಕೆ: 1

## ವಿನೂತನ ಸಾಮ ತಳಿ ಜಿ.ಪಿ.ಯು.ಎಲ್ – 6 ಪರಿಚಯ



ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಿರಿಧಾನ್ಯ ಬೆಳೆಗಳಾದ ನವಣೆ, ಸಾಮೆ, ಹಾರಕ, ಕೊರಲೆ ಮುಂತಾದ ಬೆಳೆಗಳನ್ನು ರೈತರು ಬೆಳೆಯುತ್ತಿದ್ದು, ಸಾಮಾನ್ಯವಾಗಿ ಸ್ಥಳೀಯ ತಳಿಗಳನ್ನು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ತಿಪಟೂರು ವತಿಯಿಂದ ವಿನೂತನ ಸಾಮ ತಳಿ ಜಿ.ಪಿ.ಯು.ಎಲ್ – 6 ಅನ್ನು ತಿಪಟೂರು ತಾಲ್ಲೂಕಿನ ಪಟ್ರೇಹಳ್ಳಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತಮ್ಮಡಿಹಳ್ಳಿ, ಬಿಳಿಕಲ್ಲು ಗೊಲ್ಲರಹಟ್ಟಿಯಲ್ಲಿ ಆಯ್ದ 10 ರೈತರ ತಾಕಿನಲ್ಲಿ ಮುಂಚೂಣಿ ಕ್ಷೇತ್ರ ಪ್ರಾತ್ಯಕ್ಷಿಕೆಯಡಿಯಲ್ಲಿ ಪರಿಚಯಿಸಲಾಯಿತು.

ಕೇಂದ್ರದ ಗೃಹ ವಿಜ್ಞಾನಿಗಳಾದ ಡಾ. ಸಿಂಧು ಪಿ.ಬಿ. ರವರು ಮಾತನಾಡಿ ಜಿ.ಪಿ.ಯು.ಎಲ್ – 6 ತಳಿಯು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ತಳಿಯಾಗಿದ್ದು, ಈ ತಳಿಯು 90 –95 ದಿನಗಳಲ್ಲಿ ಕಟಾವಿಗೆ ಬರುತ್ತದೆ ಮತ್ತು ಸ್ಥಳೀಯ ತಳಿಗಿಂಗ ಉತ್ತಮ ಇಳುವರಿ ನೀಡುತ್ತದೆ ಎಂದು ತಿಳಿಸಿದರು. ಮುಂದುವರೆದು ಸಾಮೆ ಸೇವಿಸುವುದರಿಂಧ ಮಾನವನ ದೇಹಕ್ಕೆ ಉತ್ತಮ ಪ್ರೋಟಿನ್, ನಾರಿನಾಂಶ, ಲೋಹ, ಕ್ಯಾಲ್ಸಿಯಂ, ಮೆಗ್ನೀಷಿಯಂ ಮುಂತಾದ ಪೋಷಕಾಂಶಗಳು ದೊರೆಯುತ್ತದೆ ಎಂದು ತಿಳಿಸಿದರು.

## ಬದನೆಯಲ್ಲಿ ಬಂದಿದೆ ಕಸಿ ಗಿಡ



ಬದನೆ ತಿಪಟೂರು ತಾಲ್ಲೂಕಿನ ರೈತರು ಬೆಳೆಯುವ ತರಕಾರಿ ಬೆಳೆಗಳಲ್ಲಿ ಒಂದು ಪ್ರಮುಖ ಬೆಳೆ.ಸಾಮಾನ್ಯವಾಗಿ ರೈತರು ಸ್ಥಳೀಯ ತಳಿಗಳನ್ನು ಹೆಚ್ಚು ಬೆಳೆಯುತ್ತಿದ್ದು ರೋಗ, ಕೀಟ ಭಾದೆ, ಗುಣಮಟ್ಟದ ತೊಂದರೆ ಮತ್ತು ಕಡಿಮೆ ಇಳುವರಿ ಹೀಗೆ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಈ ತೊಂದರೆಗಳನ್ನು ಗಮನಿಸಿದ ಕೃಷಿ ವಿಜ್ಞಾನ ಕೇಂದ್ರ, ತಿಪಟೂರು ಈ ವರ್ಷ ತಿಪಟೂರು ತಾಲ್ಲೂಕಿನ ಪಟ್ರೇಹಳ್ಳಿಯಲ್ಲಿ 7 ಜನ ರೈತರ ತಾಕಿನಲ್ಲಿ ಒಂದು ಕ್ಷೇತ್ರ ಪರಿಶೀಲನೆಯನ್ನು ಹಮ್ಮಿಕೊಂಡಿದೆ.

ಈ ಕ್ಷೇತ್ರ ಪರೀಶೀಲನೆಯ ಪರೀಶೀಲನೆಯ ಪ್ರಾರಂಭದ ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿಜ್ಞಾನಿಗಳಾದ ಡಾ.ಕೀರ್ತಿ ಶಂಕರ್ ಕೆ.ರವರು ಮಾತನಾಡಿ 7 ಜನ ರೈತರಿಗೆ 3 ಬದನೆ ತಳಿಗಳ ಸಸಿಗಳನ್ನು ನೀಡಲಾಗುತ್ತಿದೆ ಅದರಲ್ಲಿ ಒಂದುರೈತರು ಬೆಳೆಯುವ ಸ್ಥಳೀಯ ತಳಿ ಒಂದು, ಇನ್ನೊಂದು ತಳಿ ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರ, ಬೆಂಗಳೂರಿನವರು ಬಿಡುಗಡೆ ಮಾಡಿರುವ ಅರ್ಕ ಅನಂದ್ ತಳಿ ಮತ್ತು ಮತ್ತೋರ್ವ ತಳಿ ಕಸಿ ಬದನೆ ಗಿಡ. ಬದನೆಯಲ್ಲಿ ಕಸಿ ಗಿಡ ಬಂದಿದ್ದು ಇದು 3 ತಿಂಗಳಿಗೆ ಕಾಯಿ ಪ್ರಾರಂಭವಾಗಿ ಸುಮಾರು 2 ವರ್ಷದವರೆಗೂ ನಿರಂತರವಾಗಿ ಇಳುವರಿ ಬರುತ್ತದ್ದೆ, ಈ ಗಿಡವನ್ನು ಸಾಲಿನಿಂದ ಸಾಲಿಗೆ 6 ಅಡಿ ಮತ್ತು ಗಿಡದಿಂದ ಗಿಡಕ್ಕೆ 3 ಅಡಿ ಅಂತರವಿರಬೇಕು ಎಂದು ಮಾಹಿತಿ ನೀಡಿದರು.

## ಆಯುರ್ವೇದ ದಿನಾಚರಣೆ




ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೊನೇಹಳ್ಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಿಪಟೂರು. ಇವರ ಸಂಯುಕ್ತಾಶ್ರಯದಲ್ಲಿ ಆಯುರ್ವೇದ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಭಗವಾನ್ ಮಹಾವೀರ ಜೈನ್ ಆಸ್ಪತ್ರೆ ಸಹಯೋಗದಲ್ಲಿ ಕೊನೇಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಧನ್ವಂತರಿ ದೇವಿಯನ್ನು ಪೂಜಿಸಿ ಮತ್ತು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಕೆ.ವಿ.ಕೆ ಯ ಮುಖ್ಯಸ್ಥರಾದ ಡಾ. ವಿ ಗೋವಿಂದ ಗೌಡರು ಅಥರ್ವಣ ವೇದದ ಉಪವೇದವಾದ ಆಯುರ್ವೇದ ಬ್ರಹ್ಮನಿಂದ ಬಂದಿದೆ ಎಂದು ಹೇಳಲಾಗಿದೆ. ಆದ್ದರಿಂದ ಅದು ವೇದದಷ್ಟೇ ಪ್ರಾಚೀನ, ಅದರಂತೆ ಅಪೌರುಷೇಯ. ವೇದಗಳಲ್ಲಿ ಮೂಡಿಬರುವ ಈ ಪದ್ಧತಿಯಲ್ಲಿ ಆರೋಗ್ಯ ಹಾಗೂ ದೀರ್ಘ ಆಯಸ್ಸನ್ನು ಹೇಗೆ ಪಡೆಯುವುದು ಎಂಬುದನ್ನು ಹೇಳುವುದೇ ಸಂಹಿತೆಗಳ ಮೂಲ ಉದ್ದೇಶವೆಂದರು. ಕೋನೇಹಳ್ಳಿಯ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳಾದ ಡಾ. ಸುಮನಾ ಮಾತನಾಡಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ನಾವು ಆರೋಗ್ಯವಂತರಾಗಿರಬೇಕು. ರೋಗ ಮುಕ್ತರಾಗಿ ಬದುಕುವುದು ಹೇಗೆ ಎಂಬುದನ್ನು ತಿಳಿಸುವ ಶ್ರೇಷ್ಠ ಜ್ಞಾನವೇ ಆಯುರ್ವೇದ ಎಂದರು ಮುಂದುವರೆದು ಸರ್ವರೋಗನಿವಾರಕ ಎಂದು ಪ್ರಸಿದ್ದವಾಗಿರುವ ಅಮೃತ ಬಳ್ಳಿಯ ಜೊತೆಗೆ ಶುಂಠಿ, ಜೀರಿಗೆ, ತುಳಸಿ ಮಿಶ್ರಿತ ಕಷಾಯದ ಸೇವನೆ ಸಕ್ಕರೆ ಕಾಯಿಲೆಗೆ ರಾಮಬಾಣ ಎಂದರು. ಹಾಗೂ ಮದ್ಯಮ ಗಾತ್ರದ ಲೋಳೆಸರವನ್ನು ಪ್ರತಿನಿತ್ಯ ಒಂದು ಲೋಟ ನೀರು ಅಥವಾ ಮಜ್ಜಿಗೆಗೆ ಬೆರಸಿ ಸೇವಿಸುವುದರಿಂದ ಮಹಿಳೆಯರಲ್ಲಿ ಉಂಟಾಗುವ ಅತಿಯಾದ ರಕ್ತಸ್ರಾವ ಕಡಿಮೆಯಾಗುತ್ತದೆ ಎಂದರು. ತಿಪಟೂರಿನ ಹಿರಿಯ ಆರ್ಥಿಕ ಸಮಾಲೋಚಕರಾದ ಶ್ರೀಮತಿ ರೇಖಾರವರು ತಮ್ಮ ಪ್ರಶ್ನಾವಳಿಯ ಚಟುವಟಿಕೆಯ ಮೂಲಕ ಆಯುರ್ವೇದ ಚಿಕಿತ್ಸೆಯ ಜ್ಞಾನದ ಬಗ್ಗೆ ಅರಿವು ಮೂಡಿಸಿದರು. ಕಿರಿಯ ಆರ್ಥಿಕ ಸಮಾಲೋಚಕರಾದ ಶ್ರೀಮತಿ ಕುಸುಮಾ ರವರು ಸೂರ್ಯ ನಮಸ್ಕಾರದ ಆಸನದ ಪ್ರಾತ್ಯಕ್ಷಿಕ ನೀಡುವ ಮೂಲಕ ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯದ ನಿಯಂತ್ರಣ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದ ಅಂಗವಾಗಿ ಭಗವಾನ್ ಮಹಾವೀರ ಜೈನ್ ಆಸ್ಪತ್ರೆಯವರಾದ ಶ್ರೀ ಮಂಜುನಾಥ್ ಅವರ ನೇತೃತ್ವದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡು ಕಾರ್ಯಕ್ರಮಕ್ಕೆ ಭಾಗವಹಿಸಿದಂತಹ ರೈತರಿಗೆ ಬಿ. ಪಿ., ಸಕ್ಕರೆ ಕಾಯಿಲೆ, ಪಾದ ಸ್ಪರ್ಶ, ಈ. ಸಿ. ಜಿ. ಮತ್ತು ತಿಪಟೂರಿನ ಸುನಂದ ಆಸ್ಪತ್ರೆಯ ವತಿಯಿಂದ ನೇತ್ರ ತಪಾಸಣೆ ನಡೆಸಲಾಯಿತು. ಗೃಹ ವಿಜ್ಞಾನಿಯಾದ ಡಾ. ಪಿ. ಬಿ. ಸಿಂಧುರವರು ರೈತರನ್ನು ಉದ್ದೇಶಿಸಿ ಆರೋಗ್ಯವಂತರು ಹೇಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು. ರೋಗಿಷ್ಟರು ಹೇಗೆ ತಮ್ಮ ರೋಗಕ್ಕೆ ಚಿಕಿತ್ಸೆ ನೀಡಬೇಕೆಂದು ಆಯುರ್ವೇದ ಸಿದ್ಧಾಂತವನ್ನು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಕೆ.ವಿ.ಕೆ.ಯ ವಿಜ್ಞಾನಿ ಶ್ರೀ ದರ್ಶನ್ ನಿರೂಪಿಸಿದರು, ಶ್ರಿಶೈಲಾರವರು ಸಭೆಗೆ ವಂದಿಸಿದರು. ಈ ಸಂದರ್ಭದಲ್ಲಿ ತಿಪಟೂರಿನ ವೃತ್ತ ನಿರೀಕ್ಷಕರಾದ ಶ್ರೀ. ಸಿದ್ದಾರಾಮೇಶ್ವರ್‌ರವರು ಕೆ.ವಿ.ಕೆ. ಯ ಡಾ. ಶಿವಪ್ಪನಾಯಕ ಹೆಚ್.ಬಿ., ಡಾ. ಕೀರ್ತಿಶಂಕರ್, ಶ್ರೀ. ಸಂತೋಷ್, ಶಮಾ, ಕೋನೇಹಳ್ಳಿಯ ಆಯುಷ್ ಸಿಬ್ಬಂದಿ ಚಂದ್ರಕಲಾ, ತಡಸೂರಿನ ಯೋಗಾನಂದಮೂರ್ತಿ ಸೇರಿದಂತೆ 90 ಜನರು ಭಾಗವಹಿಸಿ ಉಚಿತ ಆರೋಗ್ಯ ತಪಾಸಣೆಯ ಪ್ರಯೋಜನ ಪಡೆದರು.

## ಅಲಸಂಧೆ ಮೇವಿನ ತಳಿ (ಎಂ.ಎಫ್.ಸಿ. –09–01) ಕ್ಷೇತ್ರೋತ್ಸವ



ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋನೇಹಳ್ಳಿ, ತಿಪಟೂರು ವತಿಯಿಂದ ಹಾಲಿನ ಉತ್ಪಾದನೆ ಹೆಚ್ಚಿಸಲು ತೆಂಗಿನ ತೋಟದಲ್ಲಿ ಅಂತರ ಬೆಳೆಯಾಗಿ ಮೇವಿನ ಅಲಸಂಧೆ ತಳಿ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ನೊಣವಿನಕೆರೆ ಹೋಬಳಿ, ಕರಿಕೆರೆ ಗ್ರಾಮದಲ್ಲಿ 10 ರೈತರ ತಾಕುಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಮುಂಚೂಣಿ ಪ್ರಾತ್ಯಕ್ಷಿಕೆಯ ಭಾಗವಾಗಿ ದಿನಾಂಕ 28–10–2024ರಂದು ಕರಿಕೆರೆ ಗ್ರಾಮದಲ್ಲಿ ಕ್ಷೇತ್ರೋತ್ಸವವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಬೇಸಾಯಶಾಸ್ತ್ರದ ವಿಜ್ಞಾನಿಯಾದ ಡಾ. ತಸ್ಮಿಯಾ ಕೌಸರ್ ಮಾತನಾಡಿ, ಮೇವಿನ ಅಲಸಂದೆ ತಳಿಯಾದ ಒಈಉಅ–09–01 ಯು ಅಖಿಲ ಭಾರತ ಸುಸಂಘಟಿತ ಮೇವು ಬೆಳೆ ಯೋಜನೆ, ವಿ. ಸಿ. ಫಾರಂ ಮಂಡ್ಯ ದಿಂದ ಅಭಿವೃದ್ಧಿಗೊಂಡ ತಳಿಯಾಗಿದ್ದು, ಎಲ್ಲ ಸ್ಥಿತಿಗಳಿಗೂ ಹೊಂದಿಕೊಳ್ಳುವಂತಹ ತಳಿಯಾಗಿದ್ದು ಪ್ರತಿ ಎಕರೆಗೆ 80–90 ಕ್ವಿಂಟಾಲ್ ಮೇವಿನ ಇಳುವರಿಯನ್ನು ನೀಡುತ್ತದೆ ಮತ್ತು ಪಶುಗಳಿಗೆ ಪೌಷ್ಠಿಕಯುಕ್ತ ಮೇವಾಗಿದೆ ಎಂದು ತಿಳಿಸಿದರು. ಈ ಮೇವಿನ ತಳಿಯ ಬಿತ್ತನೆಗೆ 5–6 ಕೆ.ಜಿ ಬೀಜದ ಅವಶ್ಯಕತೆಯಿದ್ದು ಜೈವಿಕ ಗೊಬ್ಬರವಾದ ರೈಜೋಬಿಯಂ ನಿಂದ ಬೀಜೋಪಚಾರ ಮಾಡಿ ತೆಂಗಿನಲ್ಲಿ ಅಂತರ ಬೆಳೆಯಾಗಿ ಬಿತ್ತುವುದರಿಂದ ಸಾರಜನಕದ ಸ್ಥಿರೀಕರಣದ ಲಾಭವಿದೆ ಹಾಗೂ ಈ ಮೇವಿನ ಬೆಳೆಯು 50–55 ದಿನಕ್ಕೆ ಕಟಾವಿಗೆ ಬರುತ್ತದೆ. ಈ ಮೇವನ್ನು ಆಹಾರವಾಗಿ ಬಳಸುವುದರಿಂದ ಒಳ್ಳೆ ಗುಣಮಟ್ಟದ ಹಾಲು ಉತ್ಪಾದನೆ ಮಾಡಬಹುದು. ಈ ಕ್ಷೇತ್ರೋತ್ಸವದ ಸಂಧರ್ಭದಲ್ಲಿ ಗ್ರಾಮಸ್ಥರಾದ ರಮೇಶ್ ಕೆ.ಎಸ್, ಶಿವಕುಮಾರ್ ಕೆ.ಬಿ, ರವೀಶ್ ಕಾಶಿರಾಜು, ಮಂಜುಳ ಮತ್ತು ಮರುಳಸಿದ್ದಪ್ಪ ಉಪಸ್ಥಿತರಿದ್ದರು.

## ಆಹಾರ ಹಾಗೂ ಪೌಷ್ಟಿಕ ಭದ್ರತೆಗಾಗಿ ಮೌಲ್ಯವರ್ಧನೆ

ರೈತ ಉತ್ಪಾದಕರ ಸಂಸ್ಥೆಗಳಿಗೆ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ಮೌಲ್ಯವರ್ಧನೆಯ ತರಬೇತಿಯನ್ನು ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಆಯೋಜಿಸಲಾಗಿತ್ತು. ತಿಪಟೂರು ಎಫ್.ಪಿ.ಓ, ಕೊಕೊನಟ್ ತಿಪಟೂರು ಎಫ್.ಪಿ.ಓ, ಸ್ವರ್ಣಭೂಮಿ ಎಫ್.ಪಿ.ಓ ಹಾಗೂ ಜೀವಜಲ ಎಫ್.ಪಿ.ಓದ ಸಿ.ಇ.ಓ, ನಿರ್ದೇಶಕರು, ಅಧ್ಯಕ್ಷರು ಹಾಗೂ ಆಸಕ್ತ ರೈತರು ಭಾಗವಹಿಸಿರುತ್ತಾರೆ. ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ವಿ. ಗೋವಿಂದ ಗೌಡ ರವರು ಹೆಚ್ಚು ಭೂಮಿ ಮತ್ತು ಜಲ ಸಂಪನ್ಮೂಲಗಳನ್ನು ಬಳಸದೆ ಬೆಳೆಯುತ್ತಿರುವ ಜನಸಂಖ್ಯೆಯನ್ನು ಪೋಷಿಸಲು ನಾವು ನಮ್ಮ ಆಹಾರ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿದೆ. ಆಹಾರ ಭದ್ರತೆಯ ಜೊತೆಗೆ ಪೌಷ್ಟಿಕ ಭದ್ರತೆಯನ್ನು ಸುಧಾರಿಸುವ ಒಂದು ಮಾರ್ಗವೆಂದರೆ ಅದು “ಮೌಲ್ಯವರ್ಧನೆ” ಎಂದು ಹೇಳಿದರು.

ಡಾ. ಸಿಂಧು ಪಿ.ಬಿ., ವಿಜ್ಞಾನಿ (ಗೃಹ ವಿಜ್ಞಾನ) ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮೌಲ್ಯವರ್ಧನೆ ಎಂದರೆ ಮೂಲ ಆಹಾರ ಪದಾರ್ಥಗಳನ್ನು ಸಂಸ್ಕರಿಸಿ ಅಥವಾ ಪುನಃ ಪರಿಷ್ಕರಿಸಿ ಅವುಗಳಲ್ಲಿ ಪೌಷ್ಟಿಕಾಂಶ, ರುಚಿ, ಬಾಳಿಕೆ ಅಥವಾ ಇತರ ಗುಣಮಟ್ಟವನ್ನು ಹೆಚ್ಚಿಸುವ ಪ್ರಕ್ರಿಯೆ. ಕೃಷಿ ಹಾಗೂ ತೋಟಗಾರಿಕೆ ಬೆಳೆಗಳನ್ನು ವಿವಿಧ ರೀತಿಯ ಪ್ರಕ್ರಿಯೆಗಳು, ತಂತ್ರಜ್ಞಾನಗಳು ಮತ್ತು ಅವಶ್ಯಕತೆಯಾದ ಬದಲಾವಣೆಗಳನ್ನು ಬಳಸಿ ಮಾಡಲಾಗುತ್ತದೆ. ಪೌಷ್ಟಿಕಾಂಶಗಳ ಪರಿಪೂರ್ಣತೆಗಾಗಿ ಆಹಾರವನ್ನು ಮೌಲ್ಯವರ್ಧನೆ ಮಾಡುವುದರಿಂದ ಆರೋಗ್ಯಕರ, ಪ್ರಭಾವಿತ ಆಹಾರವನ್ನು ಜನರಿಗೆ ನೀಡಬಹುದು. ಆಹಾರದ ಪೌಷ್ಟಿಕಾಂಶವನ್ನು ಹೆಚ್ಚಿಸುವ ಮೂಲಕ ದೇಹದ ಅವಶ್ಯಕತೆಗಳನ್ನು ಪೂರೈಸಲು ಸಹಾಯಕಾರಿ, ಆಹಾರದ ಶೇಖರಣಾವಧಿಯನ್ನು ವಿಸ್ತರಿಸಬಹುದು, ಇದರಿಂದ ಆಹಾರ ಹಾನಿಯಾಗದೇ, ನಷ್ಟವಾಗದೇ ಉಳಿಯುತ್ತದೆ. ಆಹಾರವನ್ನು ಮೌಲ್ಯವರ್ಧನೆ ಮಾಡುವುದರಿಂದ, ಅದನ್ನು ಹೆಚ್ಚಿನ ಮೌಲ್ಯದಲ್ಲಿ ಮಾರಾಟ ಮಾಡಲು ಸಾಧ್ಯವಾಗುತ್ತದೆ. ಒಟ್ಟಾರೆ, ಆಹಾರದ ಮೌಲ್ಯವರ್ಧನೆ ಮಾಡುವುದರಿಂದ ಹೆಚ್ಚಿನ ಪೌಷ್ಟಿಕತೆಯ ಪೂರೈಕೆ, ಆರ್ಥಿಕ ಲಾಭ, ಪರಿಸರ ಸಂರಕ್ಷಣೆ, ಆಹಾರ ಹಾಗೂ ಪೌಷ್ಟಿಕ ಭದ್ರತೆಗೆ ಅನುಕೂಲಕಾರಿ. ಹಣ್ಣಿನ ಜಾಮ್, ಜೆಲ್ಲಿ, ಸ್ಕ್ವಾಶ್, ನೆಕ್ಟರ್, ಕಾರ್ಡಿಯಲ್, ಒಣಗಿದ ಹಣ್ಣು, ಮತ್ತು ತರಕಾರಿಗಳು, ತೆಂಗಿನ ಬಿಸ್ಕತ್, ಕುಕ್ಕೀಸ್, ಒಣಗಿದ ತೆಂಗಿನ ತುರಿ, ತೆಂಗಿನ ಜೇನು ತುಪ್ಪ, ತೆಂಗಿನ ನೀರಿನ ವಿನೇಗರ್, ನಾಟ–ಡಿ– ಕೋಕೋ ಸೇರಿದಂತೆ ಹಲವಾರು ಮೌಲ್ಯವರ್ಧಿತ ಆಹಾರ ಪದಾರ್ಥಗಳ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು.







# ವಿಶ್ವ ಮಣ್ಣು ದಿನಾಚರಣೆ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ಕೃಷಿ ಇಲಾಖೆ, ತಿಪಟೂರು, ಪಾರಾದೀಪ್ ಪಾಸ್ಫೇಟ್, ಲಿಮಿಟೆಡ್, ತುಮಕೂರು ಹಾಗೂ ಕ್ರಿಬ್ಕೊ ಲಿಮಿಟೆಡ್, ತುಮಕೂರು ಇವರ ಸಹಯೋಗದೊಂದಿಗೆ ಕೆವಿಕೆ ಆವರಣದಲ್ಲಿ ಗುರುವಾರ ವಿಶ್ವ ಮಣ್ಣು ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮವನ್ನು ಡಾ. ಪವನ್ ಎಂ.ಪಿ ಸಹಾಯಕ ಕೃಷಿ ನಿರ್ದೇಶಕರು, ಶ್ರೀ ನಾಗರಾಜು ಉತ್ತಂಗಿ, ಮುಖ್ಯ ವ್ಯವಸ್ಥಾಪಕರು ಪಾರಾದೀಪ್ ಪಾಸ್ಫೇಟ್, ಲಿಮಿಟಡ್ ತುಮಕೂರು ಇವರು ಉದ್ಘಾಟಿಸಿದರು.




ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರ ವಿಜ್ಞಾನಿಯಾದ ಡಾ. ತಸ್ಮಿಯಾ ಕೌಸರ್ ರವರು ತಮ್ಮ ಪ್ರಾಸ್ತವಿಕ ನಿಡಿಗಳನ್ನಾಡಿ, ವಿಶ್ವ ಮಣ್ಣು ದಿನವನ್ನು ಪ್ರಪಂಚದಾದ್ಯಂತ 2024 ರಲ್ಲಿ "ಮಣ್ಣಿನ ಆರೈಕೆ: ಅಳತೆ, ಮೇಲ್ವಿಚಾರಣೆ, ನಿರ್ವಹಿಸಿ" ಅಂದರೆ ಮಣ್ಣಿನ ಆರೋಗ್ಯವನ್ನು ನಿರ್ಣಯಿಸುವಲ್ಲಿ ಮತ್ತು ಪರಿಣಾಮಕಾರಿ ನಿರ್ಧಾರ – ಮಾಡುವಿಕೆಗೆ ಮಾರ್ಗದರ್ಶನ ನಿಡುತ್ತದೆ ಎಂದು ತಿಳಿಸಿದರು ಮನುಷ್ಯನಿಗೆ ಬೇಕಾಗುವ ಶೇ. 95 ರಷ್ಟು ಆಹಾರ ಮಣ್ಣಿನಿಂದ ಬರುವುದು. ಇದರ ಜೊತೆ ಸಸ್ಯಗಳಿಗೆ ಬೇಕಾದ 18 ನೈಸರ್ಗಿಕ ಪೋಷಕಾಂಶಗಳಲ್ಲಿ ಮಣ್ಣು 15 ಪೋಷಕಾಂಶಗಳನ್ನು ಪೂರೈಸಿ ಗುಣಮಟ್ಟದ ಆಹಾರ ಉತ್ಪಾದನೆಗೆ ಸಹಕರಿಸುತ್ತದೆ.

ಡಾ. ಪವನ್ ಎಂ.ಪಿ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ತಿಪಟೂರು ಇವರು ಮಾತನಾಡಿ ಮಣ್ಣು ಒಂದು ನೈಸರ್ಗಿಕ ಸಂಪತ್ತು ಇದನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ, 1 ಇಂಚು ಮಣ್ಣು ಉತ್ಪತ್ತು ಆಗಬೇಕೆಂದರೆ 1 ವರುಷ ಬೇಕಾಗುತ್ತದೆ. ಮಣ್ಣಿನಲ್ಲಿ ಶೇ. 45 ರಷ್ಟು ಖನಿಜ ಪದಾರ್ಥಗಳು ಇರುತ್ತದೆ. ಶೇ. 25 ಗಾಳಿ ಅಂಶ, ಶೇ. 25 ನೀರಿನ ಅಂಶ ಶೇ. 5 ರಷ್ಟು ಸಾವಯವ ಅಂಶ ಇರುತ್ತದೆ. ಈ ಖನಿಜ ಪದಾರ್ಥಗಳು ಸಸ್ಯಗಳ ಬೆಳವಣಿಗೆಗೆ ಅಗತ್ಯವಿರುವ ಪೋಷಕಾಂಶಗಳನ್ನು ಒದಗಿಸುತ್ತದೆ.

ಈ ಎಲ್ಲಾ ಘಟಕಗಳು ಸೇರಿ ಮಣ್ಣಾಗುತ್ತದೆ ಎಂದು ತಿಳಿಸಿದರು ಪಾರಾದೀಪ್ ಫಾಸ್ಫೇಟ್ಸ್ ಲಿಮಿಟೇಡ್ ಮುಖ್ಯ ವ್ಯವಸ್ಥಾಪಕರಾದ ನಾಗರಾಜು ಉತ್ತಂಗಿ ರವರು ಮಾತನಾಡಿ ದೇಶದ ಎಲ್ಲಾ ಭಾಗದಲ್ಲೂ ನಮ್ಮ ಜೈ ಕಿಸಾನ್, ಪಾರಾದೀಪ್ ಪಾಸ್ಫೇಟ್, ಮಂಗಳ ಎಂಬ ಬ್ರಾಂಡಿನ ಜೈವಿಕ ಹಾಗೂ ರಾಸಾನಿಕ ಗೊಬ್ಬರಗಳು ತಯಾರಿಕೆ ಹಾಗೂ ಒದಗಿಸುತ್ತದೆ. ಕೃಷಿಯಲ್ಲಿ ನ್ಯಾನೋ ಗೊಬ್ಬರದ ಬಳಕೆಯಿಂದ ಶೇ. 25 ರಷ್ಟು ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡಿ ಹೆಚ್ಚು ಇಳುವರಿ ಪಡೆಯಬಹುದು. ಇತ್ತೀಚಿನ ದಿನಗಳಲ್ಲಿ ಕೇವಲ ಒಂದು ಅಥವಾ ಎರಡು ರೀತಿಯ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಹಲವು ಪೋಷಕಾಂಶಗಳ ಕೊರತೆ ಮಣ್ಣಿನಲ್ಲಿ ಉಂಟಾಗುತ್ತದೆ. ಆದ್ದರಿಂದ ಬ್ಯಾಲೆಂಸಡ್ ಫರ್ಟಿಲೈಜರ್ ಸಾವಯವ ಹಾಗೂ ರಾಸಾಯನಿಕ ಗೊಬ್ಬರದ ಬಳಕೆಯಿಂದ ಒಳ್ಳೆ ಇಳುವರಿಯನ್ನು ಪಡೆಯಬಹುದು ಎಂದು ತಿಳಿಸಿದರು.

ಶ್ರೀ ಶಿವಣ್ಣ ಎಲ್. ಕೆ. ಕ್ಷೇತ್ರ ಅಧಿಕಾರಿಗಳು, ಇಫ್ಕೋ ಲಿಮಿಟೆಡ್ ಕೃಷಿಯಲ್ಲಿ ನ್ಯಾನೋ ಗೊಬ್ಬರದ ಬಳಕೆ ಹಾಗೂ ಅದರ ಪರಿಚಯವನ್ನು ಮಾಡಿಕೊಟ್ಟರು. ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ವಿ ಗೋವಿಂದ ಗೌಡರು ವಿಶ್ವ ಮಣ್ಣು ದಿನದ ಹಿನ್ನೆಲೆ, ಮಣ್ಣಿನ ಮಹತ್ವ ಮತ್ತು ಮಣ್ಣಿನ ಸಾವಯವ ಇಂಗಾಲ ಹೇಗೆ ಹೆಚ್ಚಿಸಬಹುದು ಎಂದು ವೈಜ್ಞಾನಿಕವಾಗಿ ತಿಳಿಸಿಕೊಟ್ಟರು. ಜೈವಿಕ ಟ್ಯಬ್ಲೆಟ್‌ಗಳಂತಹ ಟ್ರೈಕೋಡರ್ಮ, ಸೂಡೋಮೋನಸ್ ಇದರ ಪ್ರಮುಖ್ಯತೆಯನ್ನು ತಿಳಿಸಿದರು, ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದಂತಹ ಡಾ. ದರ್ಶನ್. ಎಂ,ಇ ಡಾ. ಕೀರ್ತಿಶಂಕರ್, ಶ್ರೀ ಶೈಲಾ, ರಾಜಶೇಃರ ಹಂಜಗಿ, ಪಾರಾದೀಪ್ ಪಾಸ್ಫೇಟ್, ಲಿಮಿಟೆಡ್, ಸಹಾಯಕ ವಯವಸ್ಥಾಪಕ ಕಿರಣ್ ಕುಮಾರ್, ಶರತ್, ಮಹೇಶ್, ಶ್ರೀಮತಿ ರತಿ, ಕೇಂದ್ರದ ಸಿಬ್ಬಂದಿಯಾದ ಅಮೃತ, ರುದ್ರೇಶ್, ಹಾಜರಿದ್ದರು.

# ಮಧು ಮೇಹಿಗಳಿಗಾಗಿ ಅಕ್ಕಿ ತಳಿ ಆರ್–ಎನ್–ಆರ್–15048



ಬಿಳಿ ಅಕ್ಕಿ ಅನ್ನಕಂಡರೆ ಭಯಬೀಳುವ ಮದುಮೇಹಿಗಳಿಗಾಗಿ ಸಕ್ಕರೆ ಅಂಶ ಕಡಿಮೆ ಇರುವ ಭತ್ತವನ್ನು ಈಗ ರಾಜ್ಯದ ರೈತರು ಬೆಳೆಯಲು ಆರಂಭಿಸಿದ್ದಾರೆ. ಸೋನಾ ಮಸೂರಿ ಸೇರಿದಂತೆ ಇತರೆ ಅಕ್ಕಿಗಳಿಗೆ ಹೋಲಿಸಿದರೆ ಈ ಅಕ್ಕಿಯಲ್ಲಿ ಕಡಿಮೆ ಗ್ಲೈಸಿಮಿಕ್ ಇಂಡೆಕ್ಸ್ (ಜಿ.ಐ–ಕಾರ್ಬೋಹೈಡ್ರೇಟ್) ಇದೆ. ಇತರೆ ತಳಿಯ ಅಕ್ಕಿ ಸಾಮಾನ್ಯವಾಗಿ ಶೇ.56.5 ರಷ್ಟು ಗ್ಲೈಸಿಮಿಕ್ ಇಂಡೆಕ್ಸ್ ಹೊಂದಿದ್ದರೆ ಈ ತಳಿಯ ಅಕ್ಕಿ ಶೇ.51.5 ರಷ್ಟು ಹೊಂದಿದೆ. ರಾಗಿ ಹಾಗೂ ಸಿರಿಧಾನ್ಯಗಳ ರೀತಿಯಲ್ಲಿಯೇ ಆರ್.ಎನ್. ಆರ್ 15048 ಭತ್ತದ ತಳಿಯ ಅಕ್ಕಿಯು ನಿಧಾನವಾಗಿ ದೇಹಕ್ಕೆ ಸಕ್ಕರೆ ಅಂಶ ಬಿಡುಗಡೆ ಮಾಡುವ ವಿಶೇಷ ಗುಣ ಹೊಂದಿದೆ.

ಆರ್.ಎನ್.ಆರ್–15048 ತಳಿಯ ಭತ್ತದಿಂದ ತಯಾರಿಸಿದ ಅಕ್ಕಿಯು ಸೋನಾ ಮಸೂರಿಯಂತೆ ಗಾತ್ರದಲ್ಲಿ ಸಣ್ಣ ಹಾಗೂ ರೂಬಿ ಸ್ವಾದ ಹೊಂದಿದೆ. ಮಧು ಮೇಹಿಗಳಿಗೆ ಅನುಕೂಲವಾಗಿರುವುದರ ಜೊತೆಗೆ ಬೊಜ್ಜು ಕರಗಿಸಲು ಸಹಕಾರಿಯಾಗಿದೆ.

ಐ.ಸಿ.ಎ.ಆರ್ – ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ಇವರ ವತಿಯಿಂದ ಆರ್. ಎನ್. ಆರ್–15048 ತಳಿಯನ್ನು ಪರಿಚಹಿಸಿ ಭತ್ತ ಬೆಳೆಯುವ ಪ್ರದೇಶವನ್ನು ಹೆಚ್ಚಿಸುವ ಉದ್ದೇಶದಿಂದ ನೊಣವಿನ ಕೆರೆ ಹೋಬಳಿ, ತಿಪಟೂರು ತಾ. ವ್ಯಾಪ್ತಿಯಲ್ಲಿ 10 ಎಕರೆ ಪ್ರದೇಶದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಳ್ಳಲಾಗಿತ್ತು.

ಪ್ರಾತ್ಯಕ್ಷಿಕೆಯ ಭಾಗವಾಗಿ ಕ್ಷೇತ್ರೋತ್ಸವವನ್ನು ನೊಣವಿನಕೆರೆ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಬೇಸಾಯಶಾಸ್ತ್ರ ವಿಜ್ಞಾನಿಯಾದ ಡಾ.ತಸ್ಮಿಯಾ ಕೌಸರ್‌ರವರು ಮಾತನಾಡಿ ಆರ್.ಎನ್. ಆರ್–15048 ತಳಿಯು ಅಲ್ಪಾವಧಿ ಬೆಳೆಯಾಗಿದ್ದು 120–125 ದಿನಗಳಿಗೆ ಕೊಯ್ಲಿಗೆ ಬರುತ್ತದೆ. ಇದು ಬೆಂಕಿ ರೋಗ ನಿರೋಧಕ ಶಕ್ತಿ ಹೊಂದಿದ್ದು ನೀರಾವರಿ, ಹಾಗೂ ಅರೆನೀರಾವರಿ ಪ್ರದೇಶದಲ್ಲಿ ಬೆಳೆಯಬಹುದಾಗಿದೆ. ಏರೋಬಿಕ್ ಪದ್ದತಿಯಲ್ಲೂ ಸಹ ಬೆಳೆಯಲು ಸಾಧ್ಯವಿದೆ. ಎಕರೆಗೆ 45–50 ಕ್ವಿಂಟಾಲ್ ಇಳುವರಿ ಬರುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ರೈತರಾದ ಎಸ್. ವಿ.ಸ್ವಾಮಿ, ಪ್ರಕಾಶ್, ಉಮೇಶ್, ರಮೇಶ್, ವೇದಾನಂದ, ಮನು, ನಿಖಿಲ್, ಮೈತ್ರ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದಂತ ಶೇಖರ್ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರೈತ ದಿನಾಚರಣೆಯ ಅಂಗವಾಗಿ ಶ್ರೀಗಂಧ ಬೆಳೆಯ ಬೇಸಾಯ, ಸಂರಕ್ಷಣೆ ಮತ್ತು ಮಾರುಕಟ್ಟೆ ತರಬೇತಿ





ಐ.ಸಿ.ಎ.ಆರ್. ಕೆ.ವಿ.ಕೆ., ತಿಪಟೂರು, ಕೃಷಿ ಇಲಾಖೆ, ತಿಪಟೂರು, ಪ್ರದೀಪ್ ಫಾಸ್ಫೇಟ್ ಲಿಮಿಟೆಡ್. ತುಮಕೂರು ಮತ್ತು ಜೆ. ಫಾರ್ಮ್ ಸರ್ವೀಸ್ ತಿಪಟೂರು ವತಿಯಿಂದ ರೈತ ದಿನಾಚರಣೆಯನ್ನು ಅಂಗವಾಗಿ ಶ್ರೀಗಂಧ ಬೆಳೆಯ ಬೇಸಾಯ, ಸಂರಕ್ಷಣೆ ಮತ್ತು ಮಾರುಕಟ್ಟೆ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ. ಸಿದ್ದರಾಮೇಶ್ವರ, ವೃತ್ತ ನಿರೀಕ್ಷಕರು, ತಿಪಟೂರು ಇವರು ಶ್ರೀಗಂಧ ಬೆಳೆಗೆ ಬೇಕಾಗುವ ಸಂರಕ್ಷಣೆ ಕ್ರಮ ಮತ್ತು ರೈತರಲ್ಲಿ ಇರಬೇಕಾದ ಜಾಗೃತಿ ಬಗ್ಗೆ ಅರಿವು ಮಾಡಿಸಿದ್ದರು.

ಡಾ. ಪವನ್ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿಪಟೂರು ರವರು ಮಾತನಾಡಿ ರೈತ ದಿನಾಚರಣೆಯ ಹಿನ್ನೆಲೆ ಮತ್ತು ಕೃಷಿ ಇಲಾಖೆಯಿಂದ ರೈತರಿಗೆ ದೊರೆಯುವ ವಿವಿಧ ಸವಲತ್ತುಗಳ ಬಗ್ಗೆ ತಿಳಿಸಿದರು. ಮತ್ತೋರ್ವ ಮುಖ್ಯ ಅತಿಥಿಗಳಾದ ಡಾ. ಆದರ್ಶ್ ಪ್ರಧಾನ ಜಂಟಿ ನಿರ್ದೇಶಕರು, ಜುವಾರಿ ಸಂಸ್ಥೆ ಇವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಶ್ರೀಗಂಧದ ಬೆಳೆಯನ್ನು ರೈತರು ಹೆಚ್ಚಾಗಿ ಬೆಳೆಯುತ್ತಿದ್ದು, ವಾಣಿಜ್ಯ ಬೆಳೆಗಳ ಜೊತೆ ಭವಿಷ್ಯದ ಬೆಳೆಯಾಗಿ ಅರಣ್ಯ ಬೆಳೆಗಳನ್ನು ಬೆಳೆಯಬೇಕು ಎಂದು ಸಲಹೆ ನೀಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಡಾ. ಗೋವಿಂದ ಗೌಡರು ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೆ.ವಿ.ಕೆ., ತಿಪಟೂರು ಮಾತನಾಡಿ ಶ್ರೀಗಂಧ ಬೆಳೆಯು ನಮ್ಮ ದೇಶ ಅದರಲ್ಲೂ ಕರ್ನಾಟಕದ ಹೆಮ್ಮೆಯ ಬೆಳೆಯಾದ ಶ್ರೀಗಂಧ ಬೆಳೆಯನ್ನು ಸುಗಂಧ ತೈಲ, ಸಾಬೂನು, ಅಗರಭತ್ತಿ ಮುಂತಾದ ಸುಗಂಧಭರಿತ ಉತ್ಪನ್ನಗಳ ತಯಾರಿಯನ್ನು ಬಳುಸುವುದರಿಂದ ಹೆಚ್ಚು ಮಾರುಕಟ್ಟೆ ಬೇಡಿಕೆ ಇದೆ ಎಂದು ತಿಳಿಸಿದ್ದರು. ಕಾರ್ಯಕ್ರಮದಲ್ಲಿ ಡಾ. ನರಸಿಂಹಮೂರ್ತಿ, ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಅರಣ್ಯ ಸಂರಕ್ಷಣೆ ವಿಭಾಗ, ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ, ಬೆಂಗಳೂರು ರವರು ಶ್ರೀಗಂಧ ಬೆಳೆಯ ಬೇಸಾಯದ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದ್ದರು. ಪ್ರಗತಿಪರ ರೈತರಾದ ಗೋವರ್ಧನ ಮತ್ತು ಅರುಣ್‌ಕುಮಾರ ರವರು ರೈತರಿಗೆ ಶ್ರೀಗಂಧ ಬೆಳೆಯಿಂದ ಉಪಯೋಗ ಮತ್ತು ಮಾರುಕಟ್ಟೆ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಆಯ್ದ ಐದು ರೈತರಿಗೆ ಸನ್ಮಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕೆ.ವಿ.ಕೆ ವಿಜ್ಞಾನಿಗಳು ಮತ್ತು ಸಿಬ್ಬಂದಿ ವರ್ಗ ದವರು ಹಾಜರಿದ್ದರು.

## ರೈತ ಹಾಗೂ ವಿಜ್ಞಾನಿಗಳ ಚರ್ಚಾಗೋಷ್ಠಿ ಕಾರ್ಯಕ್ರಮ



ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ವತಿಯಿಂದ ರೈತ ಹಾಗೂ ವಿಜ್ಞಾನಿಗಳ ಚರ್ಚಾಗೋಷ್ಠಿ ಕಾರ್ಯಕ್ರಮವನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೋರಗೆರೆ ಗ್ರಾಮದಲಿ ್ಲಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬೇಸಾಯ ಶಾಸ್ತ್ರ ವಿಜ್ಞಾನಿ ಡಾ.ತಸ್ಮಿಯಾ ಕೌಸರ್‌ರವರು ಪ್ರಾಸ್ತವಿಕ ನುಡಿಗಳನ್ನಾಡುತ್ತಾ, ಚಿಕ್ಕನಾಯಕನಹಳ್ಳಿ ಕೃಷಿ ವಿಜ್ಞಾನ ಕೇಂದ್ರ ವ್ಯಾಪ್ತಿಗೆ ಸೇರಿದ್ದು ತುಮಕೂರು ಜಿಲ್ಲೆಯ ಮಧ್ಯಮ ಒಣ ವಲಯಕ್ಕೆ ಸೇರಿದೆ. ತಾಲ್ಲೂಕಿನ ವಾರ್ಷಿಕ ವಾಡಿಕೆ ಮಳೆ 754 ಎಂ.ಎಂ. ಆದರೆ ಈ ವರ್ಷ 933 ಎಂ,ಎಂ. ಅಷ್ಟು ಮಳೆ ಬಂದಿದೆ.

ತಾಲ್ಲೂಕಿನ ಪ್ರಮುಖ ಬೆಳೆಗಳು ಅಂದರೆರಾಗಿ ಹಾಗೂ ಸಿರಿಧಾನ್ಯ ಬೆಳೆಗಳು ಆದರೆ ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯ ಬೆಳೆಗಳ ವಿಸ್ತೀರ್ಣ ಕಡಿಮೆ ಆಗುತ್ತಿದೆ ಏಕೆಂದರೆ ರೈತರು ಸ್ಥಳೀಯ ಹಾಗೂ ಕಡಿಮೆ ಇಳುವರಿ ಕೊಡುವಂತಹ ತಳಿಗಳನ್ನು ಬೆಳೆಯುತ್ತಿದ್ದಾರೆ. ಈ ಒಂದು ನಿಟ್ಟಿನಲ್ಲಿ ಐದು ರೈತರ ತಾಕಿನಲ್ಲಿ ಅಧಿಕ ಇಳುವರಿಗಾಗಿ ನವಣೆ ತಳಿಗಳ ಮೌಲ್ಯಮಾಪನ ಎಂಬ ತಂತ್ರಜ್ಞಾನ ಮರುಪರಿಶೀಲನೆ ಮಾಡಲಾಯಿತು. ರೈತರಿಗೆ ಹೆಚ್ಚು ಇಳುವರಿ ಕೊಡುವಂತಹ ಮೂರು ನವಣೆ ತಳಿಗಳಾದ ಜಿ.ಪಿ.ಯು.ಎಫ್–3, ಹೆಚ್.ಎನ್–46 ಹಾಗೂ ಎಸ್.ಐ.ಎ–3159 ಪರಿಚಯಿಸಲಾಯಿತು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಸಿದ ಡಾ.ಎಂ.ಜೆ. ಚಂದ್ರೇಗೌಡ ಪ್ರಧಾನ ವಿಜ್ಞಾನಿ ಹಾಗೂ ನೋಡಲ್‌ಅಧಿಕಾರಿ, ಕೃಷಿ ತಂತ್ರಜ್ಞಾನ ಅಳವಡಿಕೆ ಮತ್ತು ಸಂಶೋಧನಾ ಕೇಂದ್ರ ಬೆಂಗಳೂರು ಇವರು ನವಣೆ ಬೆಳೆಯ ಮೂರು ತಳಿಗಳ ಕ್ಷೇತ್ರ ಭೇಟಿ ನೀಡಿದರು ನಂತರ ರೈತರ ಸಮಸ್ಯೆಗಳ ಬಗ್ಗೆ ವಿಚಾರಿಸಿ ತೆಂಗು ಬೆಳೆಯ ಉತ್ಪಾದನಾ ಹಾಗೂ ಸಂರಕ್ಷಣಾ ಕಾರ್ಯಗಾರವನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಆಯೋಜಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿಯ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ವಿ ಗೋವಿಂದ ಗೌಡರವರು ತೆಂಗು ಬೆಳೆಯಲ್ಲಿ ಕಪ್ಪು ಮೂತಿಯ ಹುಳದ ಸಮಸ್ಯೆಗೆ ಪ್ರತಿ ಗಿಡಕ್ಕೆ ಗೋನಿಯೋಜಸ್ ನೆಫನ್‌ಟ್ಯೆಡಿಸ್ ಎಂಬ ಇಪ್ಪತ್ತರಿಂದ ಮೂವತ್ತರಷ್ಟು

ಪರಾವಲಂಬಿಗಳನ್ನು ಬಿಡುವುದರಿಂದ ಕಪ್ಪು ಮೂತಿಯ ಹುಳದ ಸಮಸ್ಯೆ ಹತೋಟಿ ಮಾಡಬಹುದು ಎಂದು ತಿಳಿಸಿದರು. ಅದೇ ರೀತಿ ಕಾರ್ಯಕ್ರಮದಲ್ಲಿ ಚಿಕ್ಕನಾಯಕನಹಳ್ಳಿಯ ಸಿರಿ ಎಫ್.ಪಿ.ಓ, ಸಿ.ಇ.ಓ. ಅದಂತಹ ಶ್ರೀಯುತ ಜೈರಾಮುರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಿರಿಧಾನ್ಯ ಬೆಳೆಗಳ ಸಂಸ್ಕರಣೆ ಹಾಗೂ ಮಾರುಕಟ್ಟೆಯ ಬಗ್ಗೆ ತಿಳಿಸಿದರು ಕೇಂದ್ರದ ವಿಸ್ತರಣಾ ವಿಜ್ಞಾನಿಯಾದ ಶ್ರೀ ದರ್ಶನ್ ಎಂ.ಈ. ರವರು ಕಾರ್ಯಕ್ರಮದಲ್ಲಿ ನಿರೂಪಣೆ ಮಾಡಿ ವಂದಿಸಿದರು, ಕಾರ್ಯಕ್ರಮದಲ್ಲಿ ರೈತರಾದ ರಾಜಶೇಖರಯ್ಯ ಕೆ.ಆರ್., ಜಯಣ್ಣ, ಹಾಗೂ ಗ್ರಾಮದರೈತರು ಭಾಗವಹಿಸಿದ್ದರು.

## ಸಮಗ್ರ ಪೀಡೆ ನಿರ್ವಹಣೆ ತರಬೇತಿ

ಪ್ರಾದೇಶಿಕ ಕೇಂದ್ರ ಸಮಗ್ರ ಪೀಡೆ ನಿರ್ವಹಣಾ ಕೇಂದ್ರ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತುಮಕೂರಿನಲ್ಲಿ 2 ದಿನಗಳ ಕಾಲ ಸಮಗ್ರ ಪೀಡೆ ನಿರ್ವಹಣೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಮಗ್ರ ಮತ್ತು ಸುಸ್ಥಿರ ವಿಧಾನಗಳ ಮೂಲಕ ಕೃಷಿ ಕೀಟಗಳನ್ನು ನಿರ್ವಹಿಸುವಲ್ಲಿ ಜ್ಞಾನ ಮತ್ತು ಪ್ರಾಯೋಗಿಕ ಕೌಶಲಗಳನ್ನು ಹೆಚ್ಚಿಸುವ ಕುರಿತು ತರಬೇತಿ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಗೋವಿಂದ ಗೌಡ ವಿ ಇವರು ಉದ್ಘಾಟಿಸಿದರು.







ಸಂಪನ್ಮೂಲ ವ್ಯಕ್ತಿಗಳಾಗಿ ಕೃಷಿ ವಿಜ್ಞಾನ ಕೇಂದ್ರದ ಸಸ್ಯ ಸಂರಕ್ಷಣೆ ವಿಜ್ಞಾನಿಗಳಾದ ಶ್ರೀ. ಮನೋಜ್, ಅರಸೀಕೆರೆಯ, ಹಚ್.ಆರ್.ಎಸ್. ನ ವಿಜ್ಞಾನಿಗಳಾದ ಡಾ. ಸುದರ್ಶನ್, ಪ್ರಾದೇಶಿಕ ಕೇಂದ್ರ ಸಮಗ್ರ ಪೀಡೆ ನಿರ್ವಹಣಾ ಕೇಂದ್ರದ ಡಾ. ಜಿ.ಟಿ. ಜಯಸಿಂಹ ಮತ್ತು ಡಾ. ವಿನಯ್, ಶ್ರೀ. ನಟರಾಜು ವಿವಿಧ ವಿಷಯಗಳನ್ನು ಮಂಡಿಸಿದರು. ಪ್ರಗತಿಪರ ರೈತರಾದ ಶ್ರೀ. ಯೋಗನಂದ ಮೂರ್ತಿ, ಶ್ರೀ. ದೇವಾನಂದ್, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 40 ಕ್ಕೂ ಹೆಚ್ಚು ಕೃಷಿ ಪರಿಕರ ಮಾರಾಟಗಾರು ಮತ್ತು ರೈತರು ಭಾಗವಹಿಸಿ ಯಶಸ್ವಿಗೊಳಿಸಿದರು.

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತುಮಕೂರಿನಲ್ಲಿ 2 ದಿನಗಳ ಕಾಲ ಸಮಗ್ರ ಪೀಡೆ ನಿರ್ವಹಣೆ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ಡಾ. ಸಿಂಧು ಪಿ.ಬಿ, ಡಾ. ಕೀರ್ತಿ ಶಂಕರ್, ಡಾ. ತಸ್ಮೀಯಾ ಕೌಸರ್, ಡಾ. ದರ್ಶನ್ ಎಂ.ಈ. ಭಾಗವಹಿಸಿದ್ದರು.

# ತರಬೇತಿ ಕಾರ್ಯಕ್ರಮಗಳು

## ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ವೈಜ್ಞಾನಿಕ ಗೋಡಂಬಿ ಉತ್ಪಾದನೆ ತಾಂತ್ರಿಕತೆಗಳು | 27/11/2024 | 30 |
| 2 | ವೈಜ್ಞಾನಿಕ ಗೋಡಂಬಿ ಉತ್ಪಾದನೆ ತಾಂತ್ರಿಕತೆಗಳು | 29/11/2024 | 36 |
| 3 | ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ವಿದ್ಯಾರ್ಥಿಗಳಿಗೆ ರಾವೆ ತರಗತಿಗಳು (ಕೆ.ವಿ.ಕೆ. ಯೊಂದಿಗೆ ಕೈ ಜೋಡಣೆ ತರಬೇತಿ) | 02/12/2024 ರಿಂದ 07/12/2024 | 30 |
| 4 | ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ವಿದ್ಯಾರ್ಥಿಗಳಿಗೆ ರಾವೆ ತರಗತಿಗಳು (ಕೆ.ವಿ.ಕೆ. ಯೊಂದಿಗೆ ಕೈ ಜೋಡಣೆ ತರಬೇತಿ) | 09/12/2024 ರಿಂದ 14/12/2024 | 30 |
| 5 | ಔಷಧಿಯ ಸಸ್ಯಗಳ ಬೇಸಾಯ ಪದ್ಧತಿಗಳು | 20/12/2024 | 138 |
| 6 | ಪ್ಯಾಕಿಂಗ್ ವಸ್ತುವಿನ ಪ್ರಾಮುಖ್ಯತೆ | 21/12/2024 | 18 |
| 7 | ಸರ್ಕಾರಿ ಪ್ರೌಢಶಾಲೆ, ಮುದ್ದನಹಳ್ಳಿ, ತುರುವೇಕೆರೆ ತಾಲ್ಲೂಕು, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ದತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 06/12/2024 | 29 |
| 8 | ಸರ್ಕಾರಿ ಪ್ರೌಢಶಾಲೆ, ತಡಸೂರು, ತಿಪಟೂರು ತಾಲ್ಲೂಕು, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ದತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 12/12/2024 | 30 |
| 9 | ಆದಿಚುಂಚನಗಿರಿ, ಕೃಷಿ ವಿಜ್ಞಾನ ಕಾಲೇಜು, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ದತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 14/12/2024 | 25 |
| 10 | ಸರ್ಕಾರಿ ಪ್ರೌಢಶಾಲೆ, ಹೊನ್ನವಳ್ಳಿ, ತಿಪಟೂರು ತಾಲ್ಲೂಕು, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ದತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 21/12/2024 | 75 |





## ಹೊರ ಅವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಜೈವಿಕ ಪೀಡೆ ನಿಯಂತ್ರಕಗಳ ಪ್ರಾಮುಖ್ಯತೆ | ತಡಸೂರು | 24/10/2024 | 35 |
| 2 | ಮಾವು ಮತ್ತು ತೆಂಗು ಬೆಳೆಗಳ ಸಮಗ್ರ ನಿರ್ವಹಣೆ | ಗುಬ್ಬಿ | 07/11/2024 | 32 |
| 3 | ಮಾವು ಮತ್ತು ಬಾಳೆ ಬೆಳೆಗಳಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | ಡಿ. ರಾಮ್‌ಪುರ | 07/11/2024 | 30 |
| 4 | ಸಿರಿಧಾನ್ಯಗಳ ಬಳಕೆಯಿಂದ ಆರೋಗ್ಯ ಮೇಲಾಗುವ ಪ್ರಯೋಜನಗಳು | ನೊಣವಿನಕೆರೆ | 06/11/2024 | 300 |
| 5 | ಸ್ವಸಹಾಯ ಸಂಘ ಗುಂಪುಗಳಿಗೆ ಮೌಲ್ಯವರ್ಧಿತ ಪದಾರ್ಥಗಳ ಪ್ಯಾಕಿಂಗ್ ವ್ಯವಸ್ಥಿತ ಸರಬರಾಜು ಪದ್ಧತಿಗಳ ಕುರಿತು ತರಬೇತಿ | ಪಟ್ರೇಹಳ್ಳಿ | 26/11/2024 | 45 |
| 6 | ನರ್ಸರಿ ನಿರ್ವಹಣೆ ತರಬೇತಿ ಕಾರ್ಯಕ್ರಮ | ಬಳುವನೇರಳು | 19/11/2024 | 30 |
| 7 | ನರ್ಸರಿ ತರಕಾರಿ ಸಸಿಗಳ ಉತ್ಪಾದನೆಗೆ ಪೌಷ್ಟಿಕರಿಸಿದ ಕೋಕೋ ಪಿಟ್ | ಕಲ್ಪತರು ನರ್ಸರಿ | 06/12/2024 | 25 |
| 8 | ದಾಳಿಂಬೆ ಬೆಳೆಯಲ್ಲಿ ಗುಣಮಟ್ಟ ಮತ್ತು ರೋಗ ನಿರ್ವಹಣೆ ಸೂಕ್ಷ್ಮ ಜೀವಿಗಳ ಸಮೂಹ ಮಹತ್ವ | ಪಟ್ರೇಹಳ್ಳಿ | 15/12/2024 | 45 |

## ಪ್ರಾಯೋಜಿತ ತರಬೇತಿಗಳು

| ಕ್ರ.ಸಂ. | ವಿಷಯ | ದಿನಾಂಕ | ಒಟ್ಟು |
|---|---|---|---|
| 1 | ಕೃಷಿ ಸಖಿ ಮಾಡ್ಯೂಲ್ 2 | 04/10/2024 ರಿಂದ 09/10/2024 ರವರೆಗೆ | 35 |
| 2 | ಕೃಷಿ ಸಖಿ ಮಾಡ್ಯೂಲ್ 2 | 14/10/2024 ರಿಂದ 19/10/2024 ರವರೆಗೆ | 34 |
| 3 | ಕೃಷಿ ಸಖಿ ಮಾಡ್ಯೂಲ್ 2 | 21/10/2024 ರಿಂದ 26/10/2024 ರವರೆಗೆ | 35 |
| 4 | ಎಸ್.ಟಿ.ಅರ್.ವೈ ಪ್ರಾಯೋಜಿತ ತೋಟಗಾರಿಕೆ ಬೆಳೆಗಳಲ್ಲಿ ಮೌಲ್ಯವರ್ಧನೆ ಕುರಿತು ತರಬೇತಿ | 14/10/2024 ರಿಂದ 19/10/2024 ರವರೆಗೆ | 15 |
| 5 | ಜಲಾನಯನ ಅಭಿವೃದ್ಧಿ ಇಲಾಖೆ ಪ್ರಾಯೋಜಿತ ಪಿ.ಎಂ. ಕೃಷಿ ಸಿಂಚಾಯಿ ಯೋಜನೆ 2.0 ಕುರಿತು ತರಬೇತಿ | 29/10/2024 ರಿಂದ 30/10/2024 ರವರೆಗೆ | 100 |
| 6 | ಆರ್.ಸಿ.ಐ.ಪಿ.ಎಂ.ಸಿ ಪ್ರಾಯೋಜಿತ ಸಮಗ್ರ ಪೀಡೆ ನಿರ್ವಹಣೆ ಕುರಿತು ತರಬೇತಿ | 24/10/2024 ರಿಂದ 25/10/2024 ರವರೆಗೆ | 40 |
| 7 | ಕೃಷಿ ಸಖಿ ಮಾಡ್ಯೂಲ್ 2 | 04/11/2024 ರಿಂದ 09/11/2024 ರವರೆಗೆ | 22 |
| 8 | ಕೃಷಿ ಸಖಿ ಮಾಡ್ಯೂಲ್ 3 | 16/12/2024 ರಿಂದ 21/12/2024 | 35 |
| 9 | ಔಷಧಿ ಸಸ್ಯಗಳ ಕೃಷಿ ಹಾಗೂ ಜೀವ ವೈವಿಧ್ಯದ ಕುರಿತು ರೈತರಿಗೆ ಜಾಗ್ರತಿ ಕಾರ್ಯಾಗಾರ | 20/12/2024 | 128 |
| 10 | ಕೃಷಿ ಸಖಿ ಮಾಡ್ಯೂಲ್ –3 (ಬ್ಯಾಚ್–2) | 23/12/2024–28/12/2024 | 35 |

## ಪ್ರಮುಖ ದಿನಗಳು / ಕಾರ್ಯಕ್ರಮಗಳು ಹಾಗೂ ಕ್ಷೇತ್ರೋತ್ಸವಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಕೆ.ವಿ.ಕೆ.ಯ ಸುತ್ತಮುತ್ತಲು ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ಮತ್ತು ಗಾಂಧಿ ಜಯಂತಿ ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 02/10/2024 | 35 |
| 2 | ವಿಶ್ವ ಆಹಾರ ದಿನಾಚರಣೆ | ಇಪ್ಪಾಡಿ | 16/10/2024 | 45 |
| 3 | 9ನೇ ಆಯುರ್ವೇದ ದಿನಾಚರಣೆ 2024 | ಕೆ.ವಿ.ಕೆ., ಕೊನೇಹಳ್ಳಿ | 23/10/2024 | 85 |
| 4 | ತೆಂಗಿನ ತೋಟದಲ್ಲಿ ಅಂತರ ಬೆಳೆಯಾಗಿ ಮೇವಿನ ಅಲಸಂಧೆ ಎಂ.ಎಫ್.ಸಿ. –09–3 ಯ ಕ್ಷೇತ್ರೋತ್ಸವ | ನೊಣವಿನಕೆರೆ | 28/11/2024 | 20 |
| 5 | ಹೆಚ್ಚಿನ ಇಳುವರಿ ನೀಡುವ ನವಣೆ ತಳಿಗಳ ಕ್ಷೇತ್ರೋತ್ಸವ | ಕೊರಗೆರೆ | 29/11/2024 | 25 |
| 6 | ಹೆಚ್ಚಿನ ಉತ್ಪಾದಕತೆಗಾಗಿ ಭತ್ತದ ತಳಿ ಆರ್.ಎನ್.ಆರ್. 15048 ಕ್ಷೇತ್ರೋತ್ಸವ | ನೊಣವಿನಕೆರೆ | 08/11/2024 | 40 |
| 7 | ಚಿಕ್ಕ ಅಡಿಕೆಯಲ್ಲಿ ಅಂತರ ಬೆಳೆಯಾಗಿ ತಿಂಗಳ ಹುರುಳಿ ತಳಿ ಅರ್ಕಾ ಶರತ್ ಕುರಿತು ಪ್ರಾತ್ಯಕ್ಷಿಕೆ ಕ್ಷೇತ್ರೋತ್ಸವ | ಪಟ್ರೇಹಳ್ಳಿ | 28/11/2024 | 60 |
| 8 | ಸಂವಿಧಾನ ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 26/11/2024 | 22 |
| 9 | ವಿಶ್ವ ಮಣ್ಣು ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 05/12/2024 | 45 |
| 10 | ಕೃಷಿ ಚೌಪಾಲ್ ವಿಡಿಯೋ ಚಾಲನ್‌ನ ಉದ್ಘಾಟನ ಕಾರ್ಯಕ್ರಮದ ನೇರ ಪ್ರಸಾರ | ಕೆ.ವಿ.ಕೆ., ಕೊನೇಹಳ್ಳಿ | 07/12/2024 | 69 |
| 11 | ಸ್ವಚ್ಛತಾ ಕಾರ್ಯಕ್ರಮಡಿಯಲ್ಲಿ ಅಡುಗೆಯ ತ್ಯಾಜ್ಯ ನಿರ್ವಹಣೆಯ ಅರಿವು ಮೂಡಿಸುವ ಕಾರ್ಯಕ್ರಮ | ಕೆ.ವಿ.ಕೆ., ಕೊನೇಹಳ್ಳಿ | 16/12/2024 | 57 |
| 12 | ದೇಸಿ 9ನೇ ಸಂಪರ್ಕ ತರಗತಿಗಳ ಉದ್ಘಾಟನೆ ಮತ್ತು ಪದವಿ ಪತ್ರ ವಿತರಣೆ ಕಾರ್ಯಕ್ರಮ | ಕೆ.ವಿ.ಕೆ., ಕೊನೇಹಳ್ಳಿ | 28/12/2024 | 46 |
| 13 | ರೈತ ದಿನಾಚರಣೆಯ ಅಂಗವಾಗಿ ಶ್ರೀಗಂಧ ಕೃಷಿಯ ನಿರ್ವಹಣೆ ಕುರಿತು ತರಬೇತಿ | ಕೆ.ವಿ.ಕೆ., ಕೊನೇಹಳ್ಳಿ | 23/12/2024 | 65 |

## ಪದ್ಧತಿ ಪ್ರಾತ್ಯಕ್ಷಿಕೆ

| ಕ್ರ.ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 23/11/2024 | ಕಟ್ಲರಿ ತಯಾರಿಕೆಯ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ., ಕೊನೇಹಳ್ಳಿ | 27 |
| 2 | 16/12/2024 | ಜೀವಾಮೃತ ತಯಾರಿಕೆಯ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ., ಕೊನೇಹಳ್ಳಿ | 35 |
| 3 | 21//12/2024 | ಬೀಜಾಮೃತ ತಯಾರಿಕೆಯ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ., ಕೊನೇಹಳ್ಳಿ | 35 |
| 4 | 23/12/2024 | ಜೀವಾಮೃತ ತಯಾರಿಕೆಯ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ., ಕೊನೇಹಳ್ಳಿ | 35 |
| 5 | 28//12/2024 | ಬೀಜಾಮೃತ ತಯಾರಿಕೆಯ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ., ಕೊನೇಹಳ್ಳಿ | 35 |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ

| ಕ್ರ. ಸಂ. | ದಿನಾಂಕ | ಸ್ಥಳ | ವಿಷಯ | ರೈತರ ಸಂಖ್ಯೆ |
|---|---|---|---|---|
| 1 | 15/10/2024 | ಪರವಗೊಂಡನಹಳ್ಳಿ | ರಾಗಿಯಲ್ಲಿ ಬೆಂಕಿ ರೋಗದ ಭಾದೆ ಕ್ಷೇತ್ರ ಭೇಟಿ | 20 |
| 2 | 15/10/2024 | ಪಟ್ರೇಹಳ್ಳಿ | ಗುಲಾಬಿ ಬೆಳೆಯಲ್ಲಿ ಹೂ ಕೊರಕದ ಬಾದೆ | 20 |
| 3 | 22/10/2024 | ಹೊನ್ನವಳ್ಳಿ | ರಾಗಿ ಬರ ನಿರೋಧಕ ತಳಿ ಬಗ್ಗೆ ಕ್ಷೇತ್ರ ಭೇಟಿ | 15 |
| 4 | 22/10/2024 | ಹೊನ್ನವಳ್ಳಿ | ರಾಗಿಯಲ್ಲಿ ಹೊನ್ನೆ ಸಪ್ಪು ಕಳೆಯ ಭಾದೆ ಕ್ಷೇತ್ರ ಭೇಟಿ | 15 |
| 5 | 29/10/2024 | ಕೊನೇಹಳ್ಳಿ | ಬಾಳೆ ಬೆಳೆಯಲ್ಲಿ ಎಲೆ ಸುರುಳಿ ಸುತ್ತುವ ಕೀಟಬಾದೆ ಕುರಿತು ಕ್ಷೇತ್ರ ಬೇಟಿ | 13 |
| 6 | 12/11/2024 | ಪಟ್ರೇಹಳ್ಳಿ | ತಿಂಗಳು ಹುರುಳಿಯಲ್ಲಿ ತುಕ್ಕು ಹಿಡಿಯುವ ರೋಗ ಕುರಿತು ಕ್ಷೇತ್ರ ಬೇಟಿ | 20 |
| 7 | 03/12/2024 | ತಿಮ್ಲಾಪುರ | ತೊಗರಿಯಲ್ಲಿ ಕಾಯಿ ಕೊರಕ ಭಾದೆ ಕ್ಷೇತ್ರ ಭೇಟಿ | 20 |
| 8 | 12/12/2024 | ಶಿರಾ | ತೆಂಗಿನಲ್ಲಿ ಕಪ್ಪು ತಲೆ ಹುಳುವಿನ ಬಾದೆ ಕುರಿತು ಕ್ಷೇತ್ರ ಬೇಟಿ | 15 |
| 9 | 19/12/2024 | ಸಿರಿ ಎಫ್.ಪಿ.ಓ ಬೇಟಿ | ಬ್ರಾಂಡಿಂಗ್ ಹಾಗೂ ಮಾರುಕಟ್ಟೆ ಸಂಪರ್ಕದ ಸಮಸ್ಯೆ ಕುರಿತು | 05 |
| 10 | 19/12/2024 | ಯಳನಾಡು | ತೆಂಗಿನಲ್ಲಿ ಕೆಂಪುತಲೆ ಹುಳುವಿನ ಬಾದೆ | 05 |
| 11 | 26/12/2024 | ಗುಬ್ಬಿ | ತೆಂಗಿನಲ್ಲಿ ರಸಸೋರುವ ರೋಗದ ಬಾದೆ | 10 |


## ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:

**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,**
**ತಿಪಟೂರು, ತುಮಕೂರು ಜಿಲ್ಲೆ**